# ನವಿಲುಗನ್ನಡಿ

- ಪ್ರೇಮದ ಪರಿಮಳ ಹೊತ್ತು ತಂದ ಫೆಬ್ರುವರಿ 2025ರ ಮಯೂರ ಸಂಚಿಕೆ ಸಾಹಿತ್ಯದ ಕಣಜವಾಗಿದೆ. ಭಾಗ್ಯಜ್ಯೋತಿ ಹಿರೇಮಠ ಅವರ 'ಕುಂದದ ಬೆಳಗು' ಕವಿತೆ ಅಕ್ಕನ ಅಂತರಂಗದ ಅರಿವಿನ ಗುಹೆಯೊಳಗೆ ಸುಳಿದಾಡಿ ನಂದದ ಮಹಾಬೆಳಕಿಗೆ ಬೆರಗಾದಂತಾಯಿತು. ಅಭಿನಂದನೆಗಳು.

**ಎಸ್.ಎಸ್. ಮೇಲ್ಮಠ ಅಣ್ಣಿಗೇರಿ, ಧಾರವಾಡ**


- ರಾಜೀವ ನಾರಾಯಣ ನಾಯಕ ಇವರ ನಾಗರತಿ ಕಥೆ ಓದುತ್ತಿರುವಾಗ ನಮ್ಮ ಕಾಲೇಜು ಜೀವನದ ನೆನಪುಗಳು ಮರುಕಳಿಸಿದವು. ಕಥೆಯು ಸರಳ ಭಾಷೆಯಲ್ಲಿ ಸೊಗಸಾಗಿ ಮತ್ತು ಆಪ್ತತೆಯಿಂದ ಕೂಡಿದೆ. ಮಯೂರ ವಿಶೇಷ ಲೇಖನ ಸುರೇಶ ನಾಗಲಮಡಿಕೆ ಅವರ 'ಕಥೆಗಾರನ ಕೈಯಲ್ಲಿ ಕೊಳಲು, ಸುಖ–ದುಃಖಕ್ಕೆ ಮಿಡಿಯುವ ಕೊರಳು' ಕಥೆಗಾರರಾಗಿರುವವರಿಗೆ ಮತ್ತು ಕಥೆಗಾರರಾಗಬಯಸುವವರಿಗೆ ಮಾರ್ಗದರ್ಶಿ ಪಠ್ಯದಂತಿದೆ. 'ಭಾಷಣ ಪುರಾಣ' ಪ್ರಬಂಧ ರಸವತ್ತಾಗಿತ್ತು.

**ಶೇಖರಯ್ಯ ಟಿ.ಎಚ್.ಎಂ. ಗೆದ್ದಲಗಟ್ಟೆ, ಕೂಡ್ಲಿಗಿ**

- 'ನಾಂದಿಪದ', ಓದುಗರಿಗೆ ಭಿನ್ನ ರುಚಿಯ ವಸ್ತುವನ್ನು ನೀಡಿದ್ದು ನಿಜ. ಕನ್ನಡ ಸಾಹಿತ್ಯ, ಪ್ರೇಮದಿಂದ ಅಂತರ ಕಾಯ್ದುಕೊಂಡಂತಿದೆ ಎಂಬುದು, ಸಾಹಿತ್ಯದಿಂದ ಪ್ರೇಮವೋ, ಪ್ರೇಮದಿಂದ ಸಾಹಿತ್ಯವೋ ಎಂಬ ಗೊಂದಲ ಸೃಷ್ಟಿಸಿದೆ. ಒಂದಂತೂ ನಿಜ. ಈ 'ಪ್ರೇಮ' ಎಂಬುದರ ನಿಜವಾದ ಅರ್ಥ ಕೇವಲ ಕೆಲವರ ಅರುಹಿಗಷ್ಟೇ ಬಂದಿರುವುದರಿಂದ, ಇಂದಿನ ಯುವ ಪೀಳಿಗೆಯ ಸಾಹಿತ್ಯದಲ್ಲಿ ಪ್ರೇಮದ ಬಿಸುಪು ಎದ್ದು ಕಾಣಿಸುತ್ತಿಲ್ಲ.

**ಶಂಕರನಾರಾಯಣ ಭಟ್, ಮಾಡಗೇರಿ, ಹೊನ್ನಾವರ**

- ದಾರ್ಶನಿಕ ಲೇಖಕ ಎಂ.ಟಿ. ವಾಸುದೇವನ್ ನಾಯರ್ ಕುರಿತ ಮೋಹನ ಕುಂಟಾರ್ ಅವರ ಲೇಖನ ಸಮಗ್ರವೂ ಹಾಗೂ ವಾಸುದೇವನ್ ಅವರ ವ್ಯಕ್ತಿತ್ವದ ಪರಿಪೂರ್ಣ ಅನಾವರಣದಂತೆಯೂ ಇತ್ತು. 'ಕುಡಲೂರು ಎಂಬ ನನ್ನ ಪುಟ್ಟ ಪ್ರಪಂಚದಿಂದ ಬೇರಾಗಿ ನಿಲ್ಲಲು ನನಗೆ ಸಾಧ್ಯವಾಗದು. ಅಗಾಧ ಸಮುದ್ರಕ್ಕಿಂತ ಹರಿಯುವ ನನ್ನ ನಿಳಾ ನದಿಯೇ ನನಗೆ ಪ್ರಿಯ' ಎಂಬ ಅವರ ಮಾತುಗಳು ಕುವೆಂಪು ಅವರಿಗೆ ತೀರ್ಥಹಳ್ಳಿ, ಕುಪ್ಪಳಿ, ಕವಿಶೈಲ, ತುಂಗಾನದಿಯ, ಸಹ್ಯಾದ್ರಿಯ ದಟ್ಟಾರಣ್ಯ ಕುರಿತು ಮತ್ತೆ ಮತ್ತೆ ಕಾಡುತ್ತಿದ್ದ ನೆನಪುಗಳು ಒಳಗಣ್ಣಿನ ಆವರಣದಲ್ಲಿ ಹಾದು ಹೋದವು. ಕಲೀಮ್ ಉಲ್ಲಾ ಅವರ ಅಂಕಣ ಮುದ ನೀಡಿತು.




**ಎಂ.ಜಿ. ರಂಗಸ್ವಾಮಿ, ಹಿರಿಯೂರು**

- ಜಾನ್ ಡನ್ ಅವರ ಭಾವಾನುವಾದ ಕವನ 'ಸಾವೇ ಬೀಗಬೇಡ' ಬಿ.ಆರ್.ಲಕ್ಷ್ಮಣರಾವ್ ಅವರ ಶಬ್ದ ಶೈಲಿ ಭಾವಪೂರ್ಣವಾಗಿ ಮೂಡಿಬಂದಿದೆ.

**ಎಸ್.ಆರ್.ನರಸಿಂಹ ಪ್ರಸಾದ್, ಕುಣಿಗಲ್**

- ಶ್ರೀದೇವಿ ಕಳಸದ ಅವರ ಕಥೆ 'ಮಾಬಳೇಶ್ವರ ಯಾತ್ರಾ' ಕುತೂಹಲಕಾರಿಯಾಗಿತ್ತು. ತುರುವೀಹಾಳ ಚಂದ್ರು ಅವರ 'ಶೂನ್ಯವೆಂಬ ಕನ್ನಡಿ' ಕವಿತೆ ಬಹಳ ಇಷ್ಟವಾಯಿತು. 'ಶೂನ್ಯ' ಸಂತನ ಕನ್ನಡಿ ಎನ್ನುವ ಮಾತುಗಳು ಹೊಸ ಆಯಾಮವನ್ನೇ ಕನ್ನಡಿಗೆ ಕೊಟ್ಟಂತಾಗಿದೆ.

**ಮಾ.ವೆಂ.ಶ್ರೀನಾಥ, ಬೆಂಗಳೂರು**